ಮನುಕುಲದ ಮಹಾ ಚೇತನಕೆ ನಮೋ ಎನ್ನಿ
ಇಲ್ಲಿ ನೆಲೆಗೊಂಡಿಹರು ಕೈಮುಗಿದು ಬನ್ನಿ

ಸ್ಥಳ : ಎಸ್.ಎನ್. ಸ್ಮಾರಕ, ಎನ್.ಹೆಚ್.4, ಚಿತ್ರದುರ್ಗ

ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪ

ಬದುಕು – ಸಾಧನೆ

ಜನನ 10–12–1902 ದೇಹಾಂತ್ಯ 8–8–2000

ರಾಷ್ಟ್ರನಾಯಕ ಶ್ರೀ ಎಸ್. ನಿಜಲಿಂಗಪ್ಪ
ಬದುಕು–ಸಾಧನೆ

ಸಂಗ್ರಹ
ಹೆಚ್. ಹನುಮಂತಪ್ಪ, ಚಿತ್ರದುರ್ಗ

ಪ್ರಕಟಣೆ
ಶ್ರೀ ಎಸ್. ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್ (ರಿ.)
ರೂಮ್ ನಂ. 314, ಎಂ. ಚಿನ್ನಸ್ವಾಮಿ ಸ್ಟೇಡಿಯಂ, ಮಹಾತ್ಮಗಾಂಧಿ ರಸ್ತೆ
ಬೆಂಗಳೂರು – 560 001

ಸಹಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು



ಡಾ। ಜಸ್ಟೀಸ್ ವಿ.ಎಸ್. ಮಳಿಮಠ
ಅಧ್ಯಕ್ಷರು
ನಿಜಲಿಂಗಪ್ಪ ನ್ಯಾಷನಲ್ ಫೌಂಡೇಶನ್, ಬೆಂಗಳೂರು

ಮುನ್ನುಡಿ

ಶ್ರೀ ನಿಜಲಿಂಗಪ್ಪನವರು ಸತ್ಯಸಂಧರು, ಶೀಲಸಂಪನ್ನರು, ಸರಳಜೀವಿಗಳು, ಸಹೃದಯರು, ಪ್ರಾತಃಸ್ಮರಣೀಯರು. ಸಾರ್ವಜನಿಕ ಜೀವನ ಅದರಲ್ಲೂ ರಾಜಕಾರಣ ಇತ್ತೀಚಿನ ದಿನಗಳಲ್ಲಿ ಹೆಚ್ಚು ಹೆಚ್ಚು ಸ್ವಾರ್ಥತೆ, ಜಾತೀಯತೆ, ಭ್ರಷ್ಟಾಚಾರ, ಕ್ರೌರ್ಯದಿಂದ ಕೂಡಿದ್ದು ಜನಪ್ರತಿನಿಧಿಗಳು ರಾಜ್ಯಾಂಗದತ್ತವಾದ ಆಡಳಿತದ ನಿರ್ದೇಶನ ತತ್ವಗಳನ್ನು (Directive Principles of State policy) ಮರೆತು ಜನಹಿತಕ್ಕೆ ವ್ಯತಿರಿಕ್ತವಾಗಿ ನಡೆಯುವುದೇ ಹೆಚ್ಚಾಗಿದ್ದು ಸಾಮಾಜಿಕ ಸಾಮರಸ್ಯ (Social equilibrium)ದ ಕೊಂಡಿ ಕಳಚಿಕೊಂಡಂತೆ ಭಾಸವಾಗುತ್ತದೆ.

ಭಾರತ ಹಳ್ಳಿಗಳ ನಾಡು. ಭಾರತದ ಜೀವನಾಡಿ ಗ್ರಾಮೀಣ ಜನ. ದೇಶದ ಬಹುಭಾಗದಲ್ಲಿರುವ ಜನ ಗ್ರಾಮಜೀವಿಗಳು. ಅವರ ಬಾಳು ಹಸನಾಗಬೇಕು ಜೀವನಾವಶ್ಯಕತೆಗಳಾದ ಅನ್ನ, ವಸ್ತ್ರ, ವಸತಿ, ಶಿಕ್ಷಣ, ಆರೋಗ್ಯ, ಉದ್ಯೋಗ ಪ್ರತಿಯೊಬ್ಬರಿಗೂ ದೊರೆಯುವಂತಾಗಬೇಕು. ಅಭಿವೃದ್ಧಿಯ ಹೆಸರಿನಲ್ಲಿ ನಗರೀಕರಣಕ್ಕೆ ಹೆಚ್ಚು ಒತ್ತು ದೊರೆಯುತ್ತಿದ್ದು

ಶೇಕಡ ೧೫ ಭಾಗ ಇದ್ದ ನಗರಗಳ ಜನಸಂಖ್ಯೆ 35 ಕ್ಕೆ ಏರಿ ಗ್ರಾಮಗಳು ಬರಿದಾಗುತ್ತಿವೆ. ಗ್ರಾಮೀಣ ಜೀವನ ದುರ್ಭರವಾಗುತ್ತಿದೆ.

ಅನ್ನದಾತ ರೈತನ ಜೀವನ ಏರುಪೇರಾಗಿದೆ. ವ್ಯವಸಾಯ ಗುಡಿಕೈಗಾರಿಕೆಗಳು ಕ್ಷೀಣಿಸುತ್ತಿವೆ. ನಮ್ಮ ಅನೇಕ ಯೋಜನೆಗಳು ಊರ್ಧ್ವ ಮುಖವಾಗಿದ್ದು ತಳಮಟ್ಟದ ಜನರ ಜೀವನ ಕಷ್ಟಕರವಾಗುತ್ತಿದೆ.

ರಾಜಕಾರಣಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಸದಾ ಸಾಮಾನ್ಯಜನರ, ಬಡವರ, ಕೃಷಿಕರ, ಕೃಷಿಕಾರ್ಮಿಕರ ಜೀವನ ಹಸನಾಗಲು ಅನೇಕ ದೀರ್ಘಕಾಲೀನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ ಶ್ರೀಮಾನ್ ನಿಜಲಿಂಗಪ್ಪನವರು ಜನಹಿತವನ್ನೇ ಧ್ಯೇಯವಾಗಿಟ್ಟುಕೊಂಡು ನಡೆಸಿದ ಅನುಕರಣೀಯ ಜೀವನ ಸದಾಕಾಲ ಪ್ರಸ್ತುತ. ಅದಕ್ಕಾಗಿ ಈ ಕಿರು ಹೊತ್ತಿಗೆ.

ಈ ಕಿರು ಹೊತ್ತಿಗೆಯನ್ನು ಪ್ರಕಟಿಸಲು ಸಹಾಯನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ನಿಜಲಿಂಗಪ್ಪನವರನ್ನು ಹತ್ತಿರದಿಂದ ಬಲ್ಲ ಚಿತ್ರದುರ್ಗದ ಹೆಚ್. ಹನುಮಂತಪ್ಪನವರು ಈ ಕೈಪಿಡಿಯನ್ನು ಅರ್ಥಪೂರ್ಣವಾಗಿ ರೂಪಿಸಿ ನಿಜಲಿಂಗಪ್ಪನವರ ಜೀವನಚಿತ್ರ ಓದುಗರ ಮನಸ್ಸಿನಲ್ಲಿ ಚಿರಕಾಲ ಉಳಿಯುವಂತೆ ಮಾಡಿದ್ದಾರೆ. ಅವರ ಶ್ರಮ ಸಾರ್ಥಕವಾಗಲೆಂಬುದೇ ಆಶಯ.

– ವಿ.ಎಸ್. ಮಳಿಮಠ

ಅಧ್ಯಕ್ಷರು

ಅರಿಕೆ

ಚಿತ್ರದುರ್ಗ ಐತಿಹಾಸಿಕನಗರ. ಬಂದ ಪ್ರವಾಸಿಗರಿಗೆ ಏಳು ಸುತ್ತಿನಕೋಟೆ, ಬುರುಜುಗಳು, ಅಕ್ಕತಂಗಿಯ ಹೊಂಡ, ಗೋಪಾಲಸ್ವಾಮಿ ಹೊಂಡ, ತುಪ್ಪದಕೊಳ, ಒನಕೆ ಓಬವ್ವನ ಕಿಂಡಿ, ಚಂದ್ರವಳ್ಳಿ, ಮುರುಘಾಮಠ, ಮುರುಘಾವನ, ಇವುಗಳ ಜತೆಗೆ ಇತ್ತೀಚೆಗೆ ಸೇರಿಕೊಂಡ ನಿಜಲಿಂಗಪ್ಪನವರ ಸ್ಮಾರಕವೂ ಪ್ರೇಕ್ಷಣೀಯವಾಗಿ ಜನರನ್ನು ಆಕರ್ಷಿಸುತ್ತಿವೆ.

ಜನರು ಹೆಚ್ಚುಹೆಚ್ಚು ನಾಗರಿಕವಾಗಿ ಬೆಳೆದಂತೆ, ವಿದ್ಯಾವಂತರಾದಂತೆ ಪ್ರವಾಸ, ಪ್ರವಾಸಿತಾಣಗಳು, ಧಾರ್ಮಿಕಸ್ಥಾನಗಳ ಪರಿಚಯ ಮತ್ತು ದರ್ಶನ ಹೆಚ್ಚಾಗುತ್ತದೆ. ಇತ್ತೀಚೆಗೆ ವ್ಯವಸ್ಥಿತ ಪ್ರೇಕ್ಷಣೀಯ ಪ್ರವಾಸಗಳು (Conducted Tours) ಹೆಚ್ಚಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ನಾಲ್ಕರಲ್ಲಿ ಪ್ರಮುಖವಾಗಿ ಎದ್ದು ಕಾಣುವ ಈ ಸ್ಮಾರಕ ಪ್ರವಾಸಿಗರನ್ನು, ಶಾಲಾಮಕ್ಕಳನ್ನು, ಯುವಕರನ್ನು ಹೆಚ್ಚಾಗಿ ಆಕರ್ಷಿಸುತ್ತಿದೆ. ರಾಜಧಾನಿ ಬೆಂಗಳೂರಿಗೆ ಹೋಗುವ, ಬೆಂಗಳೂರಿನಿಂದ ಉತ್ತರ ಕರ್ನಾಟಕಕ್ಕೆ ಹೋಗುವ ಜನ ಸ್ವಲ್ಪಕಾಲ ನಿಂತು ಸ್ಮಾರಕವನ್ನು ನೋಡುವ ಪರಿಪಾಟು ಹೆಚ್ಚಾಗುತ್ತಿದೆ.

ಅಂತಹ ಪ್ರವಾಸಿಗರ ಕುತೂಹಲವನ್ನು ತಣಿಸುವ ಸಲುವಾಗಿ ನಿಜಲಿಂಗಪ್ಪನವರ ಪರಿಚಯ ಮಾಡಿಕೊಡುವುದೇ ಈ ಕಿರುಹೊತ್ತಿಗೆಯ ಉದ್ದೇಶ.



ರಾಜಕೀಯ ಮಾಡದ ರಾಜಕಾರಣಿ ಶ್ರೀ ನಿಜಲಿಂಗಪ್ಪ

ಈ ನಾಡುಕಂಡ ಅಪರೂಪದ ರಾಜಕಾರಣಿ ಶ್ರೀ ನಿಜಲಿಂಗಪ್ಪನವರು. ಅವರು ಕರ್ನಾಟಕದ ಏಕೀಕರಣದ ನಂತರ ಏಕೀಕೃತ ಕರ್ನಾಟಕದ ಪ್ರಥಮ ಮುಖ್ಯಮಂತ್ರಿಗಳಾಗಿದ್ದು, ಸುಮಾರು ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿಗೆ ಕೈಗೊಂಡ ಹಲವಾರು ಕಾರ್ಯಕ್ರಮಗಳು ಸಾಕ್ಷೀಭೂತವಾಗಿರುತ್ತವೆ. ಶ್ರೀಯುತರು ರಾಜಕಾರಣಿಯಾಗಿದ್ದರೂ ರಾಜಕಾರಣ ಮಾಡಲಿಲ್ಲ. ಮುಖ್ಯಮಂತ್ರಿಯಾಗಿದ್ದು ಸಾರ್ವಜನಿಕ ಜೀವನದ ಸಭ್ಯತೆಯನ್ನು ಕಾಪಾಡಿಕೊಂಡು ಬಂದವರು. ಮಹಾತ್ಮಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ಸರಳ ಜೀವನವನ್ನು ನಡೆಸಿದವರು. ಎಂದೂ ಅಧಿಕಾರಕ್ಕೆ ಆಸೆಪಟ್ಟವರಲ್ಲ. ಕೇಂದ್ರ ಸರ್ಕಾರದ ಮಂತ್ರಿ ಪದವಿ, ರಾಷ್ಟ್ರಪತಿ ಪದವಿ ಕೈಬೀಸಿ ಕರೆದರೂ ತಾವು ನಂಬಿದ ತತ್ವ, ಸಿದ್ಧಾಂತಗಳಿಂದಾಗಿ ಆ ಪದವಿಗಳನ್ನು ಒಪ್ಪಿಕೊಳ್ಳಲಿಲ್ಲ.

ಅಂತಹ ಆದರ್ಶ ರಾಜಕಾರಣಿ ನಮ್ಮವರು, ಕರ್ನಾಟಕದವರು, ಅದರಲ್ಲೂ ಚಿತ್ರದುರ್ಗದವರು ಎಂಬುದು ನಮ್ಮೆಲ್ಲರ ಹೆಮ್ಮೆ.

ಎಸ್. ನಿಜಲಿಂಗಪ್ಪನವರು ನಿಸ್ಪೃಹ, ಪ್ರಾಮಾಣಿಕ, ಜನಪರ ಕಾಳಜಿಯ ಮುಖ್ಯಮಂತ್ರಿಗಳಾಗಿದ್ದರು ಎನ್ನುವುದು ಹೆಮ್ಮೆಯ ಸಂಗತಿ, ಸದಾ ಬರಗಾಲಕ್ಕೆ ತುತ್ತಾಗುವ ಅಂದಿನ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ

ತಾಲ್ಲೂಕಿನ ಹಲವಾಗಲು ಗ್ರಾಮದಲ್ಲಿ ಹುಟ್ಟಿ, ಬಡತನದ ನಡುವೆ ಬೆಳೆದು, ಬಂಧುಗಳ ಮನೆಯಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ವ್ಯಾಸಂಗವನ್ನು ಮಾಡಿ ಚಿತ್ರದುರ್ಗ, ಬೆಂಗಳೂರು ಮತ್ತು ಪುಣೆಗಳಲ್ಲಿ ಉನ್ನತ ವ್ಯಾಸಂಗವನ್ನು ಮುಗಿಸಿದರು. ಒಬ್ಬ ವ್ಯಕ್ತಿ ತತ್ವನಿಷ್ಠನಾಗಿದ್ದಾರೆ ಜೀವನದಲ್ಲಿ ಏನೆಲ್ಲವನ್ನೂ ಸಾಧಿಸಿ ತೋರಿಸಬಹುದು ಎಂಬುದಕ್ಕೆ ಅವರ ಜೀವನ ಸಂದೇಶ ನಮಗೆ ಹಾಗೂ ಬರುವ ತಲೆಮಾರಿನವರೆಲ್ಲರಿಗೂ ಮಾರ್ಗದರ್ಶಕ. ಅವರ ಬದುಕು ಬರಹ ನಿಜಕ್ಕೂ ರೋಚಕ, ಸಂವೇದನಾಶೀಲರಾಗಿದ್ದ ಅವರು ಎಲ್ಲಾ ಸಂದಿಗ್ಧತೆ ಹಾಗೂ ಸಂಕಷ್ಟಗಳ ನಡುವೆ, ಉತ್ತಮವಾಗಿ ಹಣಗಳಿಸುತ್ತಿದ್ದ ವಕೀಲ ವೃತ್ತಿಯನ್ನು ಬಿಟ್ಟು ರಾಷ್ಟ್ರದ ಬಿಡುಗಡೆಗಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು. ತಮ್ಮ ಕುಟುಂಬದವರ ಪ್ರೋತ್ಸಾಹ ಹಾಗೂ ತ್ಯಾಗದಿಂದ ರಾಷ್ಟ್ರಮಟ್ಟದಲ್ಲಿ ಅತ್ಯಂತ ಎತ್ತರಕ್ಕೆ ಏರಿದ ಮೇರು ವ್ಯಕ್ತಿತ್ವದ ದ್ರಷ್ಟಾರರಾಗಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ನಿಜಲಿಂಗಪ್ಪನವರು ಹರಿದು ಹಂಚಿಹೋಗಿದ್ದ ಕನ್ನಡನಾಡನ್ನು ಒಂದುಗೂಡಿಸಿದ ಶಿಲ್ಪಿ. ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ರಾಜ್ಯದಲ್ಲಿ ಅನೇಕ ನೀರಾವರಿ, ಕೈಗಾರಿಕೆ ಹಾಗೂ ವಿದ್ಯುತ್ ಯೋಜನೆಗಳ ಸ್ಥಾಪನೆಗೆ ಕಾರಣ ಕರ್ತರಾಗಿದ್ದಾರೆ.

ಅಂದಿನ ಪ್ರಧಾನಿ ಜವಹರ ಲಾಲ್‌ನೆಹರುರವರೊಂದಿಗೆ

ವೈಯಕ್ತಿಕ ಜೀವನದಲ್ಲಿ ಶ್ರದ್ಧೆ ಹಾಗೂ ಪ್ರಾಮಾಣಿಕತೆಯನ್ನು ಕಾಪಾಡಿಕೊಂಡು ಬಂದಿದ್ದಾರೆ.

ಕರ್ನಾಟಕ ಪ್ರಾಂತರಚನೆ ಘೋಷಣೆ 1956 ನವೆಂಬರ್ ಒಂದರಂದು ಆಯಿತು. ಅಂದಿನ ರಾಷ್ಟ್ರಪತಿ ರಾಜೇಂದ್ರಪ್ರಸಾದರು ಏಕೀಕೃತ ಕರ್ನಾಟಕ ರಾಜ್ಯದ ಉದ್ಘಾಟನೆ ಮಾಡಿದರು. ಶ್ರೀ ನಿಜಲಿಂಗಪ್ಪ ಈ ವಿಶಾಲ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯೂ ಆದರು. ಮುಂದೆ ನಾಲ್ಕು ಬಾರಿ, ಅಂದರೆ

1) 01-11-1956 ರಿಂದ 10-04-1957

2) 10-04-1957 ರಿಂದ 16-05-1958

3) 21-06-1962 ರಿಂದ 03-03-1967

4) 1967 ರಿಂದ 29-05-1968 ಈ ಅವಧಿಯಲ್ಲಿ

ಮುಖ್ಯಮಂತ್ರಿಯಾಗಿ ಅಧಿಕಾರ ನಿರ್ವಹಿಸಿದ ಅವರು ಕರ್ನಾಟಕ ರಾಜ್ಯವನ್ನು ಪ್ರಗತಿಪಥದಲ್ಲಿ ಮುನ್ನಡೆಸಿದರು.

ಏಷ್ಯಾ ಖಂಡದಲ್ಲೇ ಅತ್ಯಂತ ದೊಡ್ಡದಾದ ಶರಾವತಿ ಜಲವಿದ್ಯುತ್ ಯೋಜನೆಯನ್ನು ಸ್ಥಾಪಿಸಿದ್ದು ಅವರು ಕರ್ನಾಟಕಕ್ಕೆ ಸಲ್ಲಿಸಿದ ಮಹತ್‌ಸೇವೆಯಾಗಿದೆ.

ರಾಜ ಪ್ರಮುಖ ಜಯಚಾಮರಾಜ ಒಡೆಯರ್ ರವರೊಂದಿಗೆ



④

ಕೃಷ್ಣಾ ಮೇಲ್ದಂಡೆ ಯೋಜನೆ, ಹೇಮಾವತಿ, ಘಟಪ್ರಭಾ, ಮಲಪ್ರಭಾ, ಹಾರಂಗಿ, ಕಬಿನಿ ಜಲಾಶಯಗಳಿಗೆ ಅಸ್ತಿಭಾರ ಹಾಕಿದ ಅವರು ಅವುಗಳ ನಿರ್ಮಾಣದ ಕೆಲಸವನ್ನೂ ಪ್ರಾರಂಭಿಸಿದರು. ಬೆಂಗಳೂರಿಗೆ ಕಾವೇರಿ ನೀರನ್ನು ಮೊದಲಿಗೆ ಒದಗಿಸಿದವರೇ ನಿಜಲಿಂಗಪ್ಪನವರು. ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಹಾಲು ಸರಬರಾಜು ಕೇಂದ್ರ, ಜರ್ಮನ್ ನೆರವಿನಿಂದ ಹೊಸ ಎಲೆಕ್ಟ್ರಿಕ್ ಕಾರ್ಖಾನೆ ಸ್ಥಾಪನೆ, ಅಲ್ಯೂಮಿನಿಯಂ ಕಾರ್ಖಾನೆ, ಸಕ್ಕರೆ ಕಾರ್ಖಾನೆಗಳು, ಬಂದರು ಇಲಾಖೆ ಸ್ಥಾಪಿಸಿ ಕಾರವಾರ, ಮಂಗಳೂರು ಬಂದರುಗಳ ಸ್ಥಾಪನೆ ಇವೆಲ್ಲಾ ಇವರ ಕಾಲದಲ್ಲಾದವು. ಭೂಸುಧಾರಣಾ ವರದಿ ಜಾರಿ, ವಿಶ್ವೇಶ್ವರಯ್ಯ ಕೈಗಾರಿಕಾ ವಸ್ತುಸಂಗ್ರಹಾಲಯದ ಸ್ಥಾಪನೆ, ಕರ್ನಾಟಕ ಮೆಡಿಕಲ್ ಕಾಲೇಜು ಆರಂಭ ಇವರ ಆಡಳಿತ ಅವಧಿಯ ಮೆಚ್ಚುವ ಸಾಧನೆಗಳು, ದೇಶದಲ್ಲಿ ಮೊದಲ ಬಾರಿಗೆ ಕರ್ನಾಟಕದಲ್ಲಿ ರಾಜಕೀಯ ಸಂತ್ರಸ್ತರಿಗೆ ಪಿಂಚಣಿ ಮಂಜೂರು ಮಾಡಿದ್ದು ಅವರ ದಾಖಲೆ.

ನಿಜಲಿಂಗಪ್ಪನವರು ನೈಜ ಗಾಂಧೀವಾದಿಯಾಗಿದ್ದರು. ತಮ್ಮ ಹೈಸ್ಕೂಲ್ ದಿನಗಳಿಂದಲೇ ಗಾಂಧೀಜಿಯವರ ಬದುಕು ಬರಹಗಳಿಂದ ಪ್ರಭಾವಿತರಾಗಿದ್ದರು. ಗಾಂಧೀಜಿಯವರು ಪ್ರತಿಪಾದಿಸಿದ ಗ್ರಾಮ ಸ್ವರಾಜ್ಯದ ಬಗ್ಗೆ ಅವರು ಅಪಾರ ನಂಬಿಕೆ ಇಟ್ಟುಕೊಂಡಿದ್ದರು. ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅವರು ಹಳ್ಳಿಯ ಜೀವನದ ಎಲ್ಲಾ ಮಗ್ಗುಲುಗಳನ್ನು ಆಮೂಲಾಗ್ರವಾಗಿ ಬಲ್ಲವರಾಗಿದ್ದರು. ಅವರ ಹೃದಯವು ಹಳ್ಳಿಗಳ ಬಗ್ಗೆ, ಹಳ್ಳಿಗಳ ಅಭಿವೃದ್ಧಿ, ಹಳ್ಳಿಗರ ಜೀವನ ಸುಧಾರಣೆ ಬಗ್ಗೆ ಸದಾ ಮಿಡಿಯುತ್ತಿತ್ತು. ನಾಗರಿಕತೆ, ನಗರೀಕರಣದ ಹುಚ್ಚಿನಲ್ಲಿ

ಉಕ್ಕಿನ ಮಹಿಳೆ ಪ್ರಧಾನಿ ಇಂದಿರಾಜಿಯವರೊಂದಿಗೆ



ಅಂದಿನ ಪ್ರಧಾನಿ ಲಾಲ್‌ಬಹದೂರ್ ಶಾಸ್ತ್ರಿ ರವರೊಂದಿಗೆ

ಗ್ರಾಮೀಣ ಸಂಸ್ಕೃತಿ ನಶಿಸುತ್ತಿರುವುದನ್ನು ಕಂಡು ಅವರು ಮಮ್ಮಲ ಮರುಗುತ್ತಿದ್ದರು. ಭಾರತದ ಪಂಚವಾರ್ಷಿಕ ಯೋಜನೆಗಳು ಬೃಹತ್‌ಯಂತ್ರ ಸ್ಥಾವರಗಳ ಸ್ಥಾಪನೆಗೆ ದಾರಿಮಾಡಿಕೊಡುವುದಲ್ಲದೆ ಅವುಗಳಿಂದ ಕೆಲವು ನಗರಗಳು ಹಾಗೂ ಶ್ರೀಮಂತರು ಬೆಳೆಯಲು ಅವಕಾಶವಾಗುತ್ತದೆಯೇ ವಿನಹ, ಹಳ್ಳಿಗಳಿಗೆ ಹೆಚ್ಚಿನ ಅನುಕೂಲವಾಗುವುದಿಲ್ಲ ಮತ್ತು ದೇಶದ ಬಡತನ ನಿರ್ಮೂಲನವಾಗುವುದಿಲ್ಲಎನ್ನುವುದು ನಿಜಲಿಂಗಪ್ಪನವರ ಅಭಿಪ್ರಾಯ ವಾಗಿತ್ತು. ಗ್ರಾಮೀಣ ಕೈಗಾರಿಕೆಗಳು, ಗುಡಿಕೈಗಾರಿಕೆಗಳಿಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಮುಖ ಸ್ಥಾನವಿಲ್ಲವೆಂದೂ ಇವುಗಳ ಸ್ಥಿತಿಗತಿಗಳ ಬಗ್ಗೆ ಯೋಜನಾ ಆಯೋಗದ ಸದಸ್ಯರು ಅಗತ್ಯ ಗಮನ ಕೊಡುತ್ತಿಲ್ಲವೆಂದೂ ನಿಜಲಿಂಗಪ್ಪನವರಿಗೆ ಬೇಸರವಿತ್ತು.

ಚೀನಾ ಪ್ರಧಾನಿ ಚೌ-ಎನ್-ಲಾಯ್‌ರವರನ್ನು ಸ್ವಾಗತಿಸುತ್ತಿರುವ ಎಸ್ಸೆನ್



ವ್ಯವಸಾಯವು ನಮ್ಮ ಆರ್ಥಿಕ ಪ್ರಗತಿಯ ಮೂಲಾಧಾರವಾಗಿದ್ದು, ವ್ಯವಸಾಯಾಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕೆಂದು ಅವರು ಹೇಳುತ್ತಿದ್ದರು. ವ್ಯವಸಾಯಕ್ಕೆ ಅನುಕೂಲಗಳನ್ನು ಕಲ್ಪಿಸದಿದ್ದರೆ ಹಣದುಬ್ಬರವನ್ನು ತಡೆಯಲಾಗುವುದಿಲ್ಲ. ದೇಶದ ಆರ್ಥಿಕ ಶಕ್ತಿಯನ್ನು ಬಲಗೊಳಿಸಲಾಗುವುದಿಲ್ಲವೆಂದು ಅವರು ಯಾವಾಗಲೂ ಹೇಳುತ್ತಿದ್ದರು. ವ್ಯವಸಾಯೋತ್ಪನ್ನಗಳು ಹೆಚ್ಚುವುದರಿಂದ ವ್ಯವಸಾಯಾಧಾರಿತ ಕೈಗಾರಿಕೆಗಳನ್ನು ದೇಶದ ಮೂಲೆಮೂಲೆಗಳಲ್ಲಿ ಸ್ಥಾಪಿಸುವುದು ಸಾಧ್ಯವಾಗುತ್ತದೆ. ಅದರಿಂದ ಗ್ರಾಮವಾಸಿಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳುತ್ತದೆ. ಕೈಗಾರಿಕೆಗಳು ಅಭಿವೃದ್ಧಿಯಾದಂತೆ ಅವು ಯಾವುದಾದರೊಂದು ಪ್ರದೇಶದಲ್ಲಿ ಕೇಂದ್ರೀಕೃತವಾಗದಂತೆಯೂ ಯಾವುದಾದರೊಂದು ಖಾಸಗಿ ಸಂಸ್ಥೆಯ ಏಕಸ್ವಾಮ್ಯ ಆಗದಂತೆಯೂ ಎಚ್ಚರಿಕೆ ವಹಿಸಬೇಕೆಂದು ಅವರು ಹೇಳುತ್ತಿದ್ದರು. ಹೊಸದಾಗಿ ಸ್ಥಾಪಿಸಲ್ಪಡುವ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವಾಗ ಅದರಿಂದ ಸರ್ಕಾರಿ ಉದ್ಯಮಗಳಿಗೆ ಹಾನಿ ಯಾಗದಂತೆ ಎಚ್ಚರಿಕೆ ವಹಿಸುವುದು ಅಗತ್ಯವೆಂದೂ ಕೈಗಾರಿಕೋದ್ಯಮ ಗಳಿಗೆ ಲೈಸೆನ್ಸ್ ಕೊಡುವುದರಿಂದ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುವಂತಾಗುವುದೆಂದೂ ಅವರ ಅಭಿಪ್ರಾಯವಾಗಿತ್ತು. ಭಾರತೀಯ ಸಮಾಜವಾದ ಅದೂ ಗಾಂಧೀಜಿ ಬೋಧಿಸಿದ ಸಮಾಜವಾದದಲ್ಲಿ ಅವರಿಗೆ ನಂಬಿಕೆ ಇತ್ತು.

ಭಾರತೀಯರನ್ನು ಜಾತಿಗಳಾಗಿ ವಿಂಗಡಿಸಿ ಅವರಲ್ಲಿ ಪ್ರತ್ಯೇಕತಾಭಾವನೆಯನ್ನು ಬೆಳೆಸುವುದು ರಾಷ್ಟ್ರದ ಐಕ್ಯತೆ ಮತ್ತು ಭದ್ರತೆಗೆ ಮಾರಕವೆಂಬುದು ಅವರ ನಂಬಿಕೆಯಾಗಿತ್ತು.

ಆರ್ಥಿಕ ದುರ್ಬಲರಿಗೆ ಮತ್ತು ಪರಿಶಿಷ್ಟರಿಗೆ ನಿವೇಶನ ಹಂಚಿಕೆ ಮಾಡುವಾಗ, ಮನೆ ಕಟ್ಟಿಕೊಡುವಾಗ ಅವರನ್ನು ಪ್ರತ್ಯೇಕವಾಗಿಸದೆ. ಅಕ್ಕಪಕ್ಕ ಕೊಟ್ಟರೆ ಸಾಮಾಜಿಕ ಸಾಮರಸ್ಯ ಕಾಪಾಡಬಹುದೆಂದು ನಂಬಿದ್ದರು ಶ್ರೀ ನಿಜಲಿಂಗಪ್ಪ.

ಎಸ್ಸೆನ್ ಅವರ ಬದುಕಿನ ಮೈಲುಗಲ್ಲುಗಳು

* 10-12-1902 ಜನನ – ಹರಪನಹಳ್ಳಿ ತಾಲ್ಲೂಕಿನ ಹಲವಾಗಲು ಗ್ರಾಮ
* 1916 – ಪ್ರಥಮ ಬಾರಿಗೆ ಗಾಂಧೀಜಿಯವರ ಭೇಟಿ * 1924 – ಬಿ.ಎ. ಪದವೀಧರ
* 1926 – ಚಿತ್ರದುರ್ಗದಲ್ಲಿ ವಕೀಲಿ ವೃತ್ತಿ
* 15-05-1927 – ದಾವಣಗೆರೆಯ ಬೆಳ್ಳೂಡಿ ಮನೆತನದ ಮುರಿಗೆಮ್ಮನವರೊಂದಿಗೆ ವಿವಾಹ
* 1936 – ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್ಸಿನ ಉಪಾಧ್ಯಕ್ಷ
* 18-09-1936 – ತುರುವನೂರಿನಲ್ಲಿ 'ಈಚಲುವನ ಸತ್ಯಾಗ್ರಹ' ಮತ್ತು ಜೈಲುವಾಸ
* 1940 – ಬ್ರಿಟಿಷ್ ಸರ್ಕಾರದಿಂದ ವಕೀಲಿ ಸನ್ನದು ರದ್ದು
* 09-08-1942 – 'ಭಾರತ ಬಿಟ್ಟು ತೊಲಗಿ' ಆಂದೋಲನದಲ್ಲಿ ಭಾಗವಹಿಸಿದಾಗ ಬಂಧನ
* 1944 – ಮೈಸೂರು ಕಾಂಗ್ರೆಸ್ ಅಧ್ಯಕ್ಷ
* 1946-1950 – ರಾಜ್ಯಾಂಗರಚನಾಸಭೆ ಸದಸ್ಯ
* 1952-56 – ಚಿತ್ರದುರ್ಗ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆ
* 1-11-1956 – ವಿಶಾಲ ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿ
* 1957 – ಮುಖ್ಯಮಂತ್ರಿಯಾಗಿ ಮುಂದುವರಿಕೆ
* 15-11-1959 – ಇಂಡಿಯನ್ ಆಯಿಲ್ ಕಾರ್ಪೊರೇಷನ್ ಅಧ್ಯಕ್ಷ
* 1962 – ಬಾಗಲಕೋಟೆಯಿಂದ ವಿಧಾನಸಭೆಗೆ ಆಯ್ಕೆ ಮುಖ್ಯಮಂತ್ರಿಯಾಗಿ ಮುಂದುವರಿಕೆ
* 1967 – ಅವಿರೋಧವಾಗಿ ಶಿಗ್ಗಾಂವಿ ಕ್ಷೇತ್ರದಿಂದ ಆಯ್ಕೆ ಮತ್ತೊಂದು ಬಾರಿ ಮುಖ್ಯಮಂತ್ರಿಯಾಗಿ ಮುಂದುವರಿಕೆ
* 12-3-1967 – ರಕ್ಷಣಾ ನಿಧಿಗೋಸ್ಕರ (ಚೀನಾ ಯುದ್ಧ) ಬಿಜಾಪುರದಲ್ಲಿ ಬಂಗಾರದ ತುಲಾಭಾರ
* 7-12-1967 – ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ (ಕರ್ನಾಟಕದಿಂದ ಪ್ರಥಮ ಬಾರಿಗೆ ಆದವರು)
* 23-7-1968 – ಜಪಾನ್ ಪ್ರವಾಸ
* 12-5-1969 – ಯೂರೋಪ್ ಪ್ರವಾಸ
* 1969 ಜುಲೈ – ಬೆಂಗಳೂರಿನಲ್ಲಿ ಐತಿಹಾಸಿಕ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ
* 1969 ಡಿಸೆಂಬರ್ – ಅಖಿಲ ಭಾರತ ಕಾಂಗ್ರೆಸ್ ಪಕ್ಷ ವಿಭಜನೆ
* 1971 – ಅಖಿಲ ಭಾರತ ಕಾಂಗ್ರೆಸ್ (ಸಂಸ್ಥಾ) ವಿಧ್ಯುಕ್ತ ಸ್ಥಾಪನೆ
* 6-3-1985 – ಸಕ್ರಿಯ ರಾಜಕೀಯದಿಂದ ನಿವೃತ್ತಿ
* 10-10-1988 – ಪತ್ನಿ ವಿಯೋಗ
* 1990 – ಸರ್ದಾರ್ ವಲ್ಲಭಭಾಯಿ ಪಟೇಲ್ ಸಂಸ್ಥೆಯ ಅಧ್ಯಕ್ಷ
* 2-10-1999 – 'ಕರ್ನಾಟಕ ರತ್ನ' ಪ್ರಶಸ್ತಿ
* 20-6-2000 – ಕಾಲು ಮುರಿತದಿಂದಾಗಿ ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ದಾಖಲು
* 25-7-2000 – ಆಸ್ಪತ್ರೆಯಿಂದ ಚಿತ್ರದುರ್ಗದ ಮನೆಗೆ * 8-8-2000 – ದೇಹಾಂತ್ಯ

S. Nijalingappa eminent elderly statesman's life serves as an inspiration to younger generation. His greatest achievement was the unification of Karnataka. He translated Gandhiji's ideals into practical programs. He stood like a role model for politicians to emulate.

He was a developmental oriented Chief Minister who concentrated much on irrigation and power projects. He adhered to the principles of simple living and pro-people thinking and remained stead fast to his values till his end.

A passionate constitutionalist, he would tell the concerned to implement the Directive Principles of the State Policy enshrined in the constitution. He has served the cause of freedom democracy and welfare of the people with utmost dedication. He has played historic roles in National Life. The sacrifices he has made, the travails he has undergone and sacrifice he had practiced are widely admired. As a devoted disciple of Mahathma Gandhi, he lived a life with transparent uprightness, scrupulousness and earnestness.

He was distressed by the rampant corruption, moral degeneration, communalism, casteism, cult of violence in the country and was anguished by the dismal conditions of the poor millions, enormous unemployment, neglect of the vast rural areas, excessive population growth, inadequacies of development works even after decades of Independence. His fervent wish was for the effective measures to find speedy, peaceful and constructive solutions to the crucial problems, and to help transformation of common men and women to enable them to think and judge for themselves and to lead a comfortable life.

He has been urging the need for decentralization of power and production, for the thrust of the economic growth from the grass-root levels to upwards and not from top to bottom.

ಶ್ರೀ ನಿಜಲಿಂಗಪ್ಪನವರ ಬಗ್ಗೆ ನಾಡಿನ ಗಣ್ಯರ ಅಭಿಮಾನದ ಮಾತುಗಳು

ಕರ್ನಾಟಕ ಶಿಲ್ಪಿ - ಕುವೆಂಪು

ಶ್ರೀಮಾನ್ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರನ್ನು ನೆನೆದಾಗ ಏಕೀಕೃತ ಕರ್ನಾಟಕವೂ, ಕರ್ನಾಟಕವನ್ನು ನೆನೆದಾಗ ನಿಜಲಿಂಗಪ್ಪನವರೂ ನೆನಪಿಗೆ ಬಂದರೆ ಆಶ್ಚರ್ಯವಿಲ್ಲ. ಕರ್ನಾಟಕ ಏಕೀಕರಣವನ್ನು ಸಾಧಿಸಿ ಸಾವಿರಾರು ವರ್ಷಗಳ ಕನ್ನಡಿಗರ ಅಭೀಷ್ಟೆಯನ್ನು ಪೂರೈಸಿದವರಲ್ಲಿ ನಿಜಲಿಂಗಪ್ಪನವರು ಅಗ್ರಗಣ್ಯರು. "ಕರ್ನಾಟಕ ಶಿಲ್ಪಿ" ಎಂಬ ಪ್ರಶಸ್ತಿ ಅವರಿಗೆ ಸಮುಚಿತವಾಗಿ ಸಲ್ಲುತ್ತದೆ.

ಅವರು ರಾಜಕಾರಣಿಯಾಗಿಯೂ ಸತ್ಯಸಂಧರು, ತತ್ವನಿಷ್ಠರು. ಮುಖ್ಯಮಂತ್ರಿಯಾಗಿಯೂ ಸರ್ವಾಹಂಕಾರವರ್ಜಿತರು ಹಾಗೂ ಸರಳ ಜೀವಿಗಳು. ಕಾಂಗ್ರೆಸ್ ಅಧ್ಯಕ್ಷರಾಗಿ ರಾಷ್ಟ್ರಮಟ್ಟದ ನಾಯಕರಾಗಿಯೂ ಅಧಿಕಾರ ಲಾಲಸೆಯಿಂದ ಅನ್ಯಾಯಕ್ಕೆ ಮಣಿದವರಲ್ಲ. ಬಸವೇಶ್ವರ, ಮಹಾತ್ಮ ಗಾಂಧೀಜಿಯವರ ತತ್ವವನ್ನು ಅರಗಿಸಿಕೊಂಡು ಅದರ ಬೆಳಕಿನಲ್ಲಿ ಬದುಕನ್ನು ನೇರ್ಪಡಿಸಿಕೊಂಡು ಆತ್ಮಗೌರವವನ್ನು ಬಿಟ್ಟುಕೊಡದೆ ಹಸನಾಗಿ ಸಮಾಧಾನದಿಂದ ಬಾಳಿದರು. ಈ ಹಸನು ಸಮಾಧಾನಗಳು ಅವರ ನಡೆನುಡಿಗಳಲ್ಲಿ ಅವರ ನಿಷ್ಕಪಟ ಮುಗ್ಧ ಮಂದಹಾಸದಲ್ಲಿ ಪ್ರತಿಬಿಂಬಿಸುತ್ತವೆ.

ಮುಂದೆ ಭಾರತೀಯ ಅಥವಾ ಕನ್ನಡನಾಡಿನ ಇತಿಹಾಸವನ್ನು ರಚಿಸುವವರು ನಿಜಲಿಂಗಪ್ಪನವರನ್ನು ಮರೆಯಲಾರರು. ಮುಂದಿನ ಪೀಳಿಗೆಗೆ ಅವರು ಧ್ರುವತಾರೆಯಾಗಲೆಂದು ಹಾರೈಸುತ್ತೇನೆ. ಆ ಹಾರೈಕೆ ಸಫಲವಾಗುವಂತೆ ಭಗವಂತನನ್ನು ಪ್ರಾರ್ಥಿಸುತ್ತೇನೆ.

ಕುಂದಣದಲ್ಲಿ ಕಟ್ಟಿದ ವಜ್ರ - ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮೀಜಿ

ಶ್ರೀ ನಿಜಲಿಂಗಪ್ಪನವರು ಚಿತ್ರದುರ್ಗದವರಾದರೂ ಕೇವಲ ಚಿತ್ರದುರ್ಗಕ್ಕೆ ಸೀಮಿತರಾದವರಲ್ಲ. ಕರ್ನಾಟಕದ ಗಡಿಯನ್ನು ದಾಟಿ ರಾಷ್ಟ್ರಮಟ್ಟಕ್ಕೆ ಏರಿದ ವ್ಯಕ್ತಿ. ಕರ್ನಾಟಕ ಏಕೀಕರಣಕ್ಕಾಗಿ ಅವರು ಸಲ್ಲಿಸಿದ ಸೇವೆ ಅಪಾರ, ಅವಿಸ್ಮರಣೀಯ, ಹರಿದು ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸಲು ಹೆಣಗಿದ ಮಹಾಶಿಲ್ಪಿ ನಿಜಲಿಂಗಪ್ಪನವರ ಕೀರ್ತಿ ಕುಂದಣದಲ್ಲಿ ಕಟ್ಟಿದ ವಜ್ರದಂತೆ ದೇದೀಪ್ಯಮಾನ, ಪ್ರಜ್ವಲಿತ. ನಿಜಲಿಂಗಪ್ಪನವರು ನಿಜಲಿಂಗಪ್ಪನವರೇ. ಅವರು ಅಜಾತಶತ್ರು. ದ್ವೇಷ, ಅಸೂಯೆ, ಸಣ್ಣತನ, ಕೀಳು ಮನೋಭಾವನೆ ಹುಡುಕಿದರೂ ಅವರ ಸ್ವಭಾವದಲ್ಲಿ ಕಾಣುವುದು ದುರ್ಲಭ.

ಸ್ವತಂತ್ರಭಾರತ - ಏಕತಂತ್ರ ಕರ್ನಾಟಕ ಇವೆರಡೂ ನಿಜಲಿಂಗಪ್ಪನವರ ಅವಳಿ ಗುರಿಗಳು - ಖಾದ್ರಿ ಶಾಮಣ್ಣ

ಭಾರತ ಬಿಟ್ಟು ತೊಲಗಿ ಚಳುವಳಿಯ ಸಂದರ್ಭ. ಎರಡನೇ ಮಹಾಯುದ್ಧ ಯಾವಾಗ ಮುಗಿಯುತ್ತದೆಂಬ ಅಂದಾಜು ಯಾರಿಗೂ ಇರಲಿಲ್ಲ. ಸೆರೆಮನೆಯಲ್ಲೇ ಜೀವನದಾದ್ಯಂತ ಕೊಳೆಯಲೂಬಹುದೆಂಬ ಭೀತಿ. ಕೆಲವು ನಾಯಕರಿಗೆ. ಏನೇನೋ ಆತಂಕ. ನಿಜಲಿಂಗಪ್ಪನವರು ಮಾತ್ರ ಎದೆಗುಂದಿರಲಿಲ್ಲ.

ಎಣಿಕೆಗೆ ಮುನ್ನವೇ ನಾಯಕರುಗಳು ಬಿಡುಗಡೆ. ಸೆರೆಮನೆಯಿಂದ ಬಿಡುಗಡೆ ಹೊಂದಿದ ಕೂಡಲೇ ತುಮಕೂರಿನಲ್ಲಿ ಕಾಂಗ್ರೆಸ್ ಅಧಿವೇಶನ. ಅದಕ್ಕೆ ನಿಜಲಿಂಗಪ್ಪನವರೇ ಅಧ್ಯಕ್ಷರು. 1945ರಲ್ಲಿ ಈ ಅಧಿವೇಶನದಲ್ಲಿ

ದಾರ್ಶನಿಕ ರಾಷ್ಟ್ರಪತಿ ಸರ್ವಪಲ್ಲಿ ರಾಧಾಕೃಷ್ಣನ್ ರವರೊಂದಿಗೆ

ನಿಜಲಿಂಗಪ್ಪನವರ ಮಹತ್ವದ ಭಾಷಣ. ಸ್ವಾತಂತ್ರ್ಯಕ್ಕಾಗಿ ಮತ್ತೊಂದು ಅಂತಿಮ ಹೋರಾಟ ನಡೆಯಬಹುದೆಂಬ ನಿರೀಕ್ಷೆ. ಗಾಂಧೀಜಿ ಪ್ರತಿಪಾದಿಸಿದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಲು ಕಾರ್ಯಕರ್ತರಿಗೆ ಕರೆ.

ರಚನಾತ್ಮಕ ಕಾರ್ಯಕ್ರಮಗಳು ಎರಡು - ಹೋರಾಟಗಳ ನಡುವಣ ಸಿದ್ಧತೆಯ ಕೆಲಸ ಸತತ ಜನಸಂಪರ್ಕಕ್ಕೆ ಹಾದಿ. ಈ ಅಧಿವೇಶನದಲ್ಲಿ ಅವರು ಸ್ವತಂತ್ರ ಭಾರತ, ಏಕತಂತ್ರ ಕರ್ನಾಟಕ ಇವೆರಡೂ ನನ್ನ ಜೀವನದ ಅವಳಿ ಗುರಿಗಳು ಎಂದು ಘೋಷಿಸಿದರು.

ಪೆರೋಲ್ ಮೇಲೆ ಬಿಡುಗಡೆಯಾಗಲು ನಿರಾಕರಿಸಿ ಜೈಲುಶಿಕ್ಷೆಯನ್ನು ಅನುಭವಿಸಿದರು

- ಜೆ.ಎಂ. ಇಮಾಮ್, ಮೈಸೂರು ರಾಜ್ಯದ ದಿವಾನರು

ಜೈಲಿನಲ್ಲಿದ್ದ ಖೈದಿಗಳನ್ನು ಪೆರೋಲ್ ಮೇಲೆ ಬಿಡುಗಡೆ ಮಾಡುವ ಅವಕಾಶವಿತ್ತು. ನಾನು ಈ ವಿಚಾರದಲ್ಲಿ ಉದಾರಿಯಾಗಿದ್ದೆ. ಅನೇಕರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದೆ. ಕಿವಿಯ ನೋವಿನಿಂದ ನರಳುತ್ತಿದ್ದ ಕೆ.ಸಿ. ರೆಡ್ಡಿ ಯವರನ್ನು ವೈದ್ಯಕೀಯ ಚಿಕಿತ್ಸೆಗಾಗಿ, ಅಸ್ವಸ್ಥರಾಗಿದ್ದ ತಮ್ಮ ತಂದೆ ರಾವ್ ಸಾಹೇಬ್ ಚನ್ನಯ್ಯನವರನ್ನು ಭೇಟಿಯಾಗಲು ಹೆಚ್.ಸಿ. ದಾಸಪ್ಪನವರನ್ನು, ರಾಮನಗರದಲ್ಲಿ ಸಂಬಂಧಿಕರ ವಿವಾಹ ಸಮಾರಂಭಕ್ಕೆ ಹೋಗಲು ಕೆ. ಹನುಮಂತಯ್ಯನವರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿದ್ದ ಭಾಗ್ಯ ನನ್ನದು. ಶ್ರೀ ಎಸ್. ನಿಜಲಿಂಗಪ್ಪ ನವರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಬಹಳ ಕಾತುರದಿಂದಿದ್ದೆ. ಬಿಡುಗಡೆ ಕೋರಿಕೆ ಪತ್ರತರಲು ನಮ್ಮಿಬ್ಬರಿಗೂ ಪರಿಚಯವಿದ್ದ ಸ್ನೇಹಿತರೊಬ್ಬರಿಗೆ ಹೇಳಿದೆ. ಆದರೆ ಶ್ರೀ ನಿಜಲಿಂಗಪ್ಪನವರು ಪೆರೋಲ್ ಮೇಲೆ ಬಿಡುಗಡೆ ಹೊಂದಲು ನಿರಾಕರಿಸಿ ಶಿಕ್ಷೆಯನ್ನು ಅನುಭವಿಸಲು ಮುಂದಾದರು.

ಜಾತ್ಯತೀತ ರಾಜಕಾರಣಿ **- ಹೆಚ್.ಎಲ್. ತಿಮ್ಮೇಗೌಡ**

ಎಸ್.ಎನ್.ಅವರಂಥ ಜಾತ್ಯತೀತ ರಾಜಕಾರಣಿ ಸಿಗುವುದು ಅಪರೂಪ. ಅವರು ಲಿಂಗಾಯಿತರಾಗಿ ಹುಟ್ಟಿದ್ದರೂ ಲಿಂಗವನ್ನು

ಧರಿಸುತ್ತಿರಲಿಲ್ಲ. ಯಾವ ಮಠಾಧಿಪತಿಯನ್ನೂ ಹೋಗಿ ನೋಡುವ ಅಭ್ಯಾಸವಿಟ್ಟುಕೊಂಡಿರಲಿಲ್ಲ. ಸಮಾಜಕ್ಕೆ ಒಳ್ಳೆ ಸೇವೆ ಸಲ್ಲಿಸಿದರೆ ಅವರ ವಿಚಾರವಾಗಿ ಒಳ್ಳೆಯ ಮಾತನಾಡಿದ್ದಾರೆ. ಅವರು ಮುಖ್ಯಮಂತ್ರಿ ಯಾಗಿದ್ದಾಗ ಒಂದು ಘಟ್ಟದಲ್ಲಿ ಉದ್ವಿಗ್ನರಾಗಿ 'ನಾನಿರುವುದು ಒಂದೇ ಒಂದು ಕೋಮಿಗಲ್ಲ. ರಾಜ್ಯದ ಎಲ್ಲಾ ಕೋಮುಗಳ ಹಿತಾಸಕ್ತಿಯನ್ನು ಗಮನಿಸಬೇಕಾಗಿರುವುದು ಮುಖ್ಯಮಂತ್ರಿಯ ಧರ್ಮ. ನಾನು ಮುಖ್ಯಮಂತ್ರಿ ಯಾಗಿರುವುದು ನಿಮಗಿಷ್ಟವಿಲ್ಲದಿದ್ದರೆ ಈಗಲೇ ಸ್ಥಾನ ತ್ಯಜಿಸುತ್ತೇನೆ. ಆದರೆ ಕೋಮುವಾದಿಯಾಗಲು ಸಿದ್ಧವಿಲ್ಲ ಎಂದಿದ್ದರು. ಆದರೆ ದುರದೃಷ್ಟ, ಇಂತಹ ನಿಜಲಿಂಗಪ್ಪನವರ ಮೇಲೂ ಜಾತಿವಾದಿ ಎಂಬ ಅಪವಾದ ಒಂದು ಕಾಲದಲ್ಲಿ ಕೇಳಿಬಂತು.

ಅಗಾಧ ಜ್ಞಾಪಕಶಕ್ತಿ - ಕೋ. ಚನ್ನಬಸಪ್ಪ

ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ಒಂದೊಂದು ಭಾಗವನ್ನೂ ನೋಡಿದ್ದಾರೆ. ಜನರನ್ನು ಮಾತನಾಡಿಸಿದ್ದಾರೆ. ವಿವಿಧ ಪ್ರಾಂತದ ಜನರನ್ನು ಬಲ್ಲರು. ಆದರೂ ಗ್ರಾಮಗಳ ಆ ಜನರ ಹೆಸರು, ಸಮಸ್ಯೆಗಳನ್ನು ಸ್ಪಷ್ಟವಾಗಿ ನೆನಪಿಟ್ಟುಕೊಂಡಿರುತ್ತಿದ್ದರು. ಆಡಿದ ಮಾತುಗಳು, ಕೂಡಿದ ಸಂದರ್ಭ ಮರೆತುಹೋದರೂ ಅವರ ಹೆಸರು ಅವರ ವಿಶಿಷ್ಟ ಸಮಸ್ಯೆಗಳನ್ನು ಮಾತ್ರ ಮರೆತಿರುವುದಿಲ್ಲ. ಕಂಡೊಡನೆ "ಹೋ ಹೇಗಿದ್ದೀರಿ ಪಾಟೀಲರೇ. ಕುಲಕರ್ಣಿಯವರೇ ದೇಸಾಯಿ ಅವರೇ..... ಗೌಡರೇ, ಸಿದ್ಧಪ್ಪನವರೇ, ಭದ್ರಪ್ಪನವರೇ, ರಂಗರಾಯರೇ, ಶೇಷಾಚಾರ್ಯರೇ ಇತ್ಯಾದಿ ದಸರಾ ದೊಂಬಿಯಲ್ಲಾದರೂ ಜನರ ಹೆಸರನ್ನು ಹಿಡಿದು ಕರೆದು ಗುರ್ತಿಸುತ್ತಿದ್ದರು.

1967ರಲ್ಲಿ ರಕ್ಷಣಾ ನಿಧಿಗೋಸ್ಕರ (ಚೀನಾ ಯುದ್ಧ) ಬಿಜಾಪುರದಲ್ಲಿ ತುಲಾಭಾರ

ಅಂತರಾಳ - ಸಂದರ್ಶನದ ಆಯ್ದಭಾಗಗಳು

ಸ್ವಾತಂತ್ರ್ಯ ಹೋರಾಟದತ್ತ ಬಗ್ಗೆ ಗಮನ ಹರಿದದ್ದು ಹೈಸ್ಕೂಲ್‌ನಲ್ಲಿರುವಾಗಲೇ ಆನಿಬೆಸೆಂಟ್, ತಿಲಕ್, ಮಹಾರಾಜ್, ಜೀವನಧಾಟಿ, ಅವರು ಮಾಡಿದ ಕೆಲಸಗಳು, ನಂತರ ಗಾಂಧಿಯವರು ತೋರಿಸಿದ ಹೊಸದಾರಿ ಇವೆಲ್ಲವೂ ನನ್ನ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿ ಸ್ವಾತಂತ್ರ್ಯದ ವಿಚಾರದಲ್ಲಿ ಆಸೆ ಬೆಳೆಯಿತು.

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದು, ಲಾಯರ್ ಆದ ಹತ್ತು ವರ್ಷದ ಮೇಲೆ. 1939ನೇ ಇಸ್ವಿ, ಅಷ್ಟರೊಳಗೆ ನಾನು ಮೈಸೂರು ಕಾಂಗ್ರೆಸ್ ಮುಖಂಡನಾಗಿದ್ದೆ. ಸಾಕಷ್ಟು ಪ್ರಚಾರ ಮಾಡಿದ್ದೆ ಜನಗಳನ್ನು ಕಾಂಗ್ರೆಸ್ಸಿಗೆ ಸೇರಿಸಿದ್ದೆ ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಾಕಷ್ಟು ಬಲವಾಗಿತ್ತು. ನಾವೇ ಪಾಸಿಟಿವ್ ಆಗಿ ಮುಂದೆ ಹೋಗಿ ಕೆಲಸ ಮಾಡಬೇಕೆಂದು ಹೇಳಿ ಒಂದು ತೀರ್ಮಾನವನ್ನು ಚಿತ್ರದುರ್ಗ ಡಿಸ್ಟಿಕ್ಟ್ ಕಾಂಗ್ರೆಸ್ ಕಮಿಟಿಯವರು ಮಾಡಿದ್ರು. ಎಸ್. ವಾಸುದೇವರಾವ್ ಅಂತೇಳಿ ಇದ್ರು. ಅವ್ರು ನಮ್ಗೆಲ್ಲಾ ಒಂಥರಾ ಮುಖಂಡರಾಗಿದ್ರು. ನಾನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾದಾಗ ಅವರು ಜಿಲ್ಲಾಕಾಂಗ್ರೆಸ್ ಸೆಕ್ರೆಟರಿ ಆಗಿದ್ರು. ಅವರು ನಾವೆಲ್ಲಾ ಸೇರಿಕೊಂಡು ಸರ್ಕಾರದ ಕಾನೂನನ್ನು ಮುರಿಯಬೇಕು, ಸತ್ಯಾಗ್ರಹ ಮಾಡಬೇಕು ಅಂತ ತೀರ್ಮಾನ ಮಾಡಿದ್ರು.

ಅಂದಿನ ಮುಖ್ಯಮಂತ್ರಿ ದೇವರಾಜು ಅರಸುರವರೊಂದಿಗೆ

ನನ್ನ ಪತ್ನಿ ನನ್ನ ಗುರು ಇದ್ದಾಂಗೆ. ಆಕೆ ವಿಚಾರ ಒಂದೇಳ್ತೀನಿ. ನನ್ನ ಅರೆಸ್ಟ್ ಮಾಡೋಕೆ ಪೋಲೀಸರಿಗೆ ಧೈರ್ಯ ಬರಲಿಲ್ಲ. ಬೆಳಗಿನ ಜಾವ 4–5 ಗಂಟೆಗೆ ಬಂದು ಬಾಗಿಲು ತಟ್ಟಿದರು. ನನಗೆ ಗೊತ್ತಿತ್ತು ಅರೆಸ್ಟ್ ಮಾಡ್ತಾರೆ ಅಂತ. ನನ್ನ ಹೆಂಡ್ತೀನ ಕೇಳ್ದೆ. ನೀನು ನಿನ್ನ ಅತ್ತೆ ಮಕ್ಕಳು ನೆಮ್ಮದಿಯಾಗಿದ್ದೀರಿ, ಕಷ್ಟ ಇಲ್ಲ. ಆದ್ರೆ ನಾನು ದುಡ್ಡಿಟ್ಟಿಲ್ಲ. ಜೈಲ್ಗೋಗ್ತೀನಿ, ಕಷ್ಟಕೊಳಗಾಗಬೇಕಾಗುತ್ತದೆ ನಿನ್ನ ಅಭಿಪ್ರಾಯ ಏನು ಅಂತ ಕೇಳ್ದೆ. ಆ ಮಹಾತಾಯಿ ಹೇಳಿದ್ಲು. ನೀವು ಗಾಂಧಿ ಪರೀಕ್ಷೆ ಕಟ್ಟಿದ್ದೀರಿ. ಅದ್ರಲ್ಲಿ ಪಾಸಾಗ್ಬೇಕೂಂತ. ಅದಕ್ಕಿಂತ ದೊಡ್ಡ ಆಶೀರ್ವಾದ ಏನ್ ಬೇಕಾಗಿತ್ತು ನನಗೆ.

ಸ್ವಾತಂತ್ರ್ಯ ಬಂತು. ಬ್ರಿಟಿಷ್ ಸರ್ಕಾರ ಹೋಯ್ತು. ನಮ್ಮ ಸರ್ಕಾರ ನಮಗೆ ಬಂತು. ನಾವೇ ಸರ್ಕಾರ ಮಾಡಿದ್ವಿ, ಆದ್ರೆ ಕಾಂಗ್ರೆಸ್ಸಿನ ಧೋರಣೆ ಏನಿತ್ತು. ಅದರ ತೀರ್ಮಾನಗಳೇನಿದ್ವು ಏನ್ಮಾಡಬೇಕೂಂತ ಗಾಂಧಿಯವರ ಆಸೆ ಇತ್ತು, ಕಾಂಗ್ರೆಸ್ಸಿನ ಉದ್ದೇಶ ಏನು ಇತ್ತು ಅದು ನೆರವೇರಲಿಲ್ಲ. ಈ ದುಃಖ ನನಗೆ ಸಾಕಷ್ಟಿದೆ.

ನಮ್ಮಲ್ಲಿರತಕ್ಕ ದೊಡ್ಡತಪ್ಪು – ವಿದ್ಯಾಭ್ಯಾಸ ಸರ್ಕಾರಿ ನೌಕರಿಗೋಸ್ಕರ ಅಂತ. ಜ್ಞಾನಾರ್ಜನೆ ಜೀವನ ಹೇಗೆ ನಡೆಸ್ಬೇಕು. ಒಂದು ವೃತ್ತಿಯನ್ನು ಮಾಡ್ಬೇಕು ಅನ್ನೋದಲ್ಲ. ಸರ್ಕಾರಿ ನೌಕರಿ ಶೇಕಡ 1–2 ಅಷ್ಟೆ ಇರೋದು. ಇಂಗ್ಲಿಷ್ ಇಲ್ದೆ ಹೋದ್ರೆ ನೌಕರಿ ಸಿಕ್ಕೋದಿಲ್ಲ ಅದಕ್ಕೋಸ್ಕರ ವ್ಯಾಮೋಹ ಜಾಸ್ತಿ ಆಗ್ತಾಇದೆ. ಇನ್ನೂ ಜಾಸ್ತಿ ಆಗ್ತಾ ಇದೆಯೇ ಹೊರತು ಕಮ್ಮಿ ಆಗ್ತಾ ಇಲ್ಲ. ಇದು ಬಹಳ ತಪ್ಪು. ಇದು ಆಗಬಾರದು.

ಭ್ರಷ್ಟಾಚಾರ, ಜಾತಿಯತೆ ನಮ್ಮ ಸಮಾಜವನ್ನು ಕೊಂದು ತಿನ್ನುತ್ತಿವೆ. ಅದಕ್ಕೆ ಕಾರಣ ಸರ್ಕಾರಗಳು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು. ತಪ್ಪು ಮಾಡಿದವರಿಗೆ ಶಿಕ್ಷೆ ಆಗುತ್ತಿಲ್ಲ. ವಿಚಾರಣೆಗಳಲ್ಲಿ ವರ್ಷಗಟ್ಟಲೆ ಕಳೀತಾರೆ. ಹೀಗಾದರೆ ಹೇಗೆ?

ನಮ್ಮ ಕಾಲದಲ್ಲಿ ಇಷ್ಟೊಂದು ಜಾತೀಯತೆ ಇರಲಿಲ್ಲ. ಭ್ರಷ್ಟಾಚಾರ ನಾನು ಸಹಿಸಲಿಲ್ಲ. ಜನ ತಿಳಿಕೊಂಡಿರೋ ಅಷ್ಟು ಭ್ರಷ್ಟಾಚಾರ ನನ್ನ ಕಾಲದಲ್ಲಿರಲಿಲ್ಲ. ಶ್ರೀರಾಮನ ಕಾಲದಲ್ಲೂ ಭ್ರಷ್ಟಾಚಾರವಿತ್ತು, ಇಲ್ಲಾ ಅಂತ ಹೇಳೋಕಾಗಲ್ಲ. ಬಹಳ ಕಡಿಮೆ ಇತ್ತು.

ಬಸವಣ್ಣ Social Reformer. ಜನ ಹೇಗಿರಬೇಕು, ಸಮಾಜ ಹೇಗಿರಬೇಕು ಅನ್ನೋದರ ಸ್ಪಷ್ಟ ಅಭಿಪ್ರಾಯವಿತ್ತು. ಅದನ್ನು ನೀವು ಜೇಬಿನಲ್ಲಿಟ್ಟುಕೊಂಡಿದ್ದೀರಿ. ನಿಮ್ಮ ಜನ ಅನುಷ್ಠಾನ ಮಾಡುತ್ತಿಲ್ಲ. ದುಡಿದು ತಿನ್ನುವ ಕಾಯಕವೇ ಕೈಲಾಸ, ಅನುಷ್ಟಾನ ಮಾಡುತ್ತಿಲ್ಲ ನಿಮ್ಮ ಜನ ಎಂದು ಅಂಬೇಡ್ಕರ್ ನನ್ನ ಮೂದಲಿಸುತ್ತಿದ್ದರು. ನಾನು ಅಂಬೇಡ್ಕರ್‌ರವರ ಮಾತುಗಳನ್ನು ಒಪ್ಪುತ್ತೇನೆ. ಬಸವಣ್ಣ ಎಲ್ಲ ಜಾತಿಗೆ ಸೇರಿದವರು. ಅವರಿಗೆ ಜಾತಿ ಇರಲಿಲ್ಲ. ಆದರೆ ನಮ್ಮವರು, ಅವರು ಲಿಂಗಾಯ್ತರು ಎಂದು ಭಾವಿಸಿದ್ದಾರೆ.

ಕೋಮುವಾದ ಹೊಲಸು. ನನ್ನ ಜಾತೀನೇ ಹೆಚ್ಚು. ನನ್ನ ಜಾತಿಗೆ ನಾನು ಸಹಾಯ ಮಾಡಬೇಕು ಇದು ಅಧರ್ಮ, ಅನ್ಯಾಯ. ಇದು ಆಗಬಾರದು.

ಜೀವನದಲ್ಲಿ ದುಡ್ಡು ಮಾಡೋಕ್ಕೆ ಮುಖ್ಯಮಂತ್ರಿಯಾಗಬೇಕೂಂತ ರಾಜಕೀಯಕ್ಕೆ ಹೋಗಲಿಲ್ಲ. ನಮ್ಮ ಜನಗಳ ಸೇವೆ ಮಾಡಬೇಕು. ರಾಜ್ಯಕ್ಕೆ ಅದರಲ್ಲಿಯೂ ಹಳ್ಳಿ ಜನಗಳಿಗೆ ಏನಾದರೂ ಮಾಡಬೇಕು ಅನ್ನೋ ಉದ್ದೇಶ ಇತ್ತು.

ಕನ್ನಡ ಚಲನಚಿತ್ರ ದಿಗ್ಗಜರೊಂದಿಗೆ



ನಾನು ಮುಖ್ಯಮಂತ್ರಿಯಾದಾಗ ನನ್ನ ಬ್ಯಾಂಕ್ ಖಾತೆಯಲ್ಲಿ ರೂ. 10,000/– ಇತ್ತು. ನಾನು ವಾಪಸ್ ಬಂದಾಗ ರೂ. 8,000/– ಇತ್ತು.

ನನ್ನ ಮಕ್ಕಳನ್ನು ರಾಜಕೀಯಕ್ಕೆ ತರಲಿಲ್ಲ. ನನ್ನ ಮಕ್ಕಳು ತಪ್ಪು ದಾರಿಯಿಂದ ದುಡಿದು ದುಷ್ಟರಾಗಬೇಕಾಗಿರಲಿಲ್ಲ. ಅವರಿಗೆ ವಿದ್ಯಾಭ್ಯಾಸ ಮಾಡಿಸ್ದೆ. ಇಬ್ಬರು ಸರ್ಕಾರಿ ನೌಕರಿಗೆ ಸೇರಿದ್ದರು. ಒಬ್ಬ ವ್ಯವಸಾಯ ಮಾಡಿಕೊಂಡಿದ್ದ. ಅವ್ರು ನಮ್ಮ ಕಷ್ಟ ನೋಡಿ ರಾಜಕಾರಣಕ್ಕೆ ಹೋಗಬಾರದು ಅಂತ ತೀರ್ಮಾನ ಮಾಡಿದ್ರು.

ಶತಾಯುಷಿ ಆಗಬೇಕೆಂಬ ಆಸೆ ಇತ್ತು. ಯಾಕೆ ಅಂದ್ರೆ ಈ ಜಗತ್ತು ನನಗೆ ಇಷ್ಟ. ಅದನ್ನು ಪ್ರೀತಿಸುತ್ತೇನೆ. I LOVE THE WORLD, I LOVE THE UNIVERSE. BECAUSE I AM A PART OF THE UNIVERSE. ರಾತ್ರಿಹೊತ್ತು ಮಲಕ್ಕೊಂಡು ನಕ್ಷತ್ರಗಳನ್ನು ನೋಡುವಾಗ, ಸೂರ್ಯ ಹುಟ್ಟೋದು ನೋಡುವಾಗ ಚಂದ್ರ ಹುಟ್ಟೋದು ನೋಡುವಾಗ, ಜನಗಳನ್ನು ನೋಡುವಾಗ, ಒಳ್ಳೇ ಮರ ನೋಡಿದಾಗ, ಅರಣ್ಯ ನೋಡಿದಾಗ, ನದಿ ನೋಡಿದಾಗ, ಸಮುದ್ರ ನೋಡಿದಾಗ ಇವೆಲ್ಲ ಆಕರ್ಷಣೀಯ ಅಲ್ವೆ ಅವನ್ನು ನೋಡಿ ಸಂತೋಷ ಪಡುವ ಆಸೆ.

ಸಾವಿನ ಬಗ್ಗೆ ಭಯ ಏಕೆ? ನನಗೆ ಭಯವಿಲ್ಲ. ಸಂತೋಷದಿಂದ ಹೋಗುತ್ತೇನೆ. ಯಾಕೆಂದ್ರೆ ಎಲ್ಹೋಗ್ತೀನಿ? ಎಲ್ಲಿಂದ ಬಂದೆನೋ ಅಲ್ಲೇ ಹೋಗುತ್ತೇನೆ. ಯಾಕೆ ಭಯ ? ಏನೂ ಭಯವಿಲ್ಲ.

ಶ್ರೀ ನಿಜಲಿಂಗಪ್ಪನವರು ನಂಬಿ ಆಚರಿಸಿದ ಗಾಂಧೀಜಿಯವರ ಏಕಾದಶ ವ್ರತಗಳು

ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ
ಸರ್ವತ್ರಭಯವರ್ಜನ, ಸರ್ವಧರ್ಮಸಮಾನತ್ವ, ಸ್ವದೇಶೀ, ಸ್ಪರ್ಶಭಾವನ

ಸಪ್ತ ಸಾಮಾಜಿಕ ಪಾತಕಗಳು

* ತತ್ವರಹಿತ ರಾಜಕೀಯ
* ಶೀಲ ಇಲ್ಲದ ಶಿಕ್ಷಣ
* ದುಡಿಮೆ ಇಲ್ಲದ ಸಂಪತ್ತು
* ಆತ್ಮಸಾಕ್ಷಿರಹಿತ ಭೋಗ
* ನೀತಿವಿಹೀನ ವಾಣಿಜ್ಯ
* ಮಾನವತಾಶೂನ್ಯ ವಿಜ್ಞಾನ
* ತ್ಯಾಗವಿಲ್ಲದ ಪೂಜೆ

ಶರಾವತಿ ಯೋಜನೆಯ ಪರಿವೀಕ್ಷಣೆ

ಎಸ್. ನಿಜಲಿಂಗಪ್ಪನವರ ಸ್ಮಾರಕ